

ಶೀನಣ್ಣ: ಊಟಕ್ಕೆ ಕುಳಿತಾಗ ದೇವರಿಗೆ ಕೈ ಮುಗಿಯುತ್ತಾರಲ್ಲಾ ಏಕೆ?

ಶಾಮಣ್ಣ: ಹೆಂಡತಿ ಮಾಡಿ ಹಾಕಿದ್ದನ್ನು ತಿನ್ನಬೇಕಲ್ಲಾ, ಅದು ಚೆನ್ನಾಗಿರಲಪ್ಪ ಎಂದು ದೇವರನ್ನು ಬೇಡುವುದು.

★★★

ಗುರು: 'ಅವರು ಕಂಬಳಿ ಹೊದ್ದು ಮಲಗಿದರು' ಇದು ಯಾವ ಕಾಲ?

ಶಿಷ್ಯ: ಚಳಿಗಾಲ, ಸಾರ್!

★★★

ಗುರು: ಕಾಕತಾಳೀಯ ಎಂಬ ಪದಕ್ಕೆ ಒಂದು ಉದಾಹರಣೆ ಕೊಡು.

ಶಿಷ್ಯ: ನನ್ನ ತಂದೆ ಮತ್ತು ನನ್ನ ತಾಯಿ ಒಬ್ಬರೂ ಒಂದೇ ದಿನ ಮದುವೆ ಆದರು, ಸಾರ್?

★★★

ಗುರು: ಮಂಕ ಎಂಬ ಪದದ ಸ್ತ್ರೀ ರೂಪ ಏನು?

ಶಿಷ್ಯ: ತುಂಬಾ ಸುಲಭ ಸಾರ್, ಮಂಕಿ!

★★★

ಆಕೆ: ಇತ್ತೀಚೆಗೆ ನೀನು ಏನು ಮಾಡುತ್ತಾ ಇದ್ದೀಯ?

ಈಕೆ: ಇಂತಹ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳುತ್ತಿದ್ದೇನೆ!

**(ಸಂಗ್ರಹ) ಎ.ಕೆ.ಪಟ್ಟಾಭಿ, ಬೆಂಗಳೂರು**

---

ಶಿಕ್ಷಕ: ಮೊದಲು ಬರುವುದು ಯಾವುದು? ಕೋಳಿಯೋ? ಮೊಟ್ಟೆಯೋ?

ವಿದ್ಯಾರ್ಥಿ: ಆರ್ಡರ್ ಮಾಡಿದ್ದು ಮೊದಲು ಬರುತ್ತದೆ.

★★★




ಕಾಫಿ ಶಾಪ್‌ನಲ್ಲಿ ಹೆಂಡತಿಗೆ ಗಂಡ ಹೇಳುತ್ತಾನೆ... 'ಬೇಗ ಕಾಫೀ ಕುಡಿ... ಕಾಫಿ ತಣ್ಣಗಾಗುತ್ತದೆ?

ಹೆಂಡತಿ: ಯಾಕೆ?

ಗಂಡ: ಬಿಸಿ ಕಾಫಿಗೆ 5 ರೂಪಾಯಿ, ಕೋಲ್ಡ್ ಕಾಫಿಗೆ 10 ರೂಪಾಯಿ ಚಾರ್ಜ್ ಮಾಡುತ್ತಾರೆ.

**(ಸಂಗ್ರಹ) ರಮಾನಂದ ಶರ್ಮಾ, ಬೆಂಗಳೂರು**

ಅಜ್ಜಿ: ನೋಡಿದ್ರೇನೇ?

ಮೊಮ್ಮಗಳು: ಏನಜ್ಜಿ?

ಅಜ್ಜಿ: ನೋಡು ವಧು ಹಸೆಮಣೆ ಮೇಲೆ ಕುಳಿತಿದ್ದರೂ ತಲೆ ಎತ್ತಿ ಯಾರನ್ನೂ ನೋಡುತ್ತಿಲ್ಲ. ನೀನೂ ಇದ್ದೀಯಾ?

ಮೊಮ್ಮಗಳು: ಅಯ್ಯೋ ಅಜ್ಜಿ... ಅವಳು ವಾಟ್ಸಾಪ್ ಆನ್‌ಲೈನ್‌ನಲ್ಲಿ ಅವ್ಳೆ!

★★★

ಆಂಟಿ: ನಿಮ್ಮಮ್ಮ ಏನು ಮಾಡ್ತಿದ್ರೆ?

ಪುಟ್ಟಿ: ನಮ್ಮಪ್ಪ ಹತ್ರ ಬೈಸ್ಕೋತಿದ್ರು.

ಆಂಟಿ: ಏನು ತಪ್ಪು ಮಾಡಿದ್ರೆ?

ಪುಟ್ಟಿ: ನಿನ್ನೆ ನೀವು ಹೇಳಿದ ಹೊಸ ರುಚಿ ಅಡುಗೆ.

**(ಸಂಗ್ರಹ) ಕುಬೇರಪ್ಪ ಎಂ. ವಿಭೂತಿ, ಹರಿಹರ**

ಜಿಪುಣನಾಗಿದ್ದ ಒಬ್ಬ ವ್ಯಕ್ತಿ ತನ್ನ ಕುಟುಂಬದೊಂದಿಗೆ ಪ್ರಯಾಣ ಹೊರಟಿದ್ದ. ಅವರು ರೈಲು ನಿಲ್ದಾಣದಲ್ಲಿದ್ದಾಗ ಅವನ ಹೆಂಡತಿಗೆ ತುಂಬಾ ಬಾಯಾರಿಕೆ ಆಯಿತು.

'ತುಂಬಾ ಬಾಯಾರಿಕೆ ಆಗುತ್ತಿದೆ ಒಂದು ಬಾಟಲ್ ನೀರನ್ನಾದರೂ ಕೊಂಡು ತನ್ನಿ' ಎಂದಳು ಅವನ ಹೆಂಡತಿ.

'ಬರೀ ನೀರೇ ಏಕೆ ಚಿಕನ್ ಬಿರಿಯಾನಿಯನ್ನೇ ತಿನ್ನೋಣ' ಎಂದ ಜಿಪುಣ ಪತಿ.

'ಚಿಕನ್ ಬಿರಿಯಾನಿಯೇ! ಹೆಸರು ಕೇಳಿಯೇ ಬಾಯಿ ನೀರೂರುತ್ತಿದೆ' ಎಂದಳು ಹೆಂಡತಿ.

'ಹಾಗಾದರೆ ಆ ನೀರಿನಿಂದಲೇ ಸದ್ಯ ಕೆಲಸ ಸಾಗಿಸು' ಎಂದ ಪತಿ.

★★★

ಗಂಡ ಹೆಂಡತಿ ನಡುವೆ ಜಗಳವಾಯಿತು. ಪತ್ನಿ ಸಿಟ್ಟಿನಿಂದ ವಿಷ ಸೇವಿಸಿದಳು. ಆದರೆ ಸಾಯಲಿಲ್ಲ, ಅಸ್ವಸ್ಥಳಾದಳು.

ಪತಿ ಸಿಟ್ಟಿನಿಂದ 'ಹೇಳಿದ ನೂರು ಬಾರಿ ಹೇಳಿದ್ದೇನೆ, ಪದಾರ್ಥಗಳನ್ನು ಕೊಳ್ಳುವಾಗ ತುಂಬ ಗಮನವಿಟ್ಟು ಕೊಳ್ಳಬೇಕೆಂದು, ಈಗ ನೋಡು ಹಣವೂ ಹೋಯಿತು. ಕೆಲಸವೂ ಆಗಲಿಲ್ಲ.'

★★★

ಕಣ್ಣಿನ ಡಾಕ್ಟರ್: (ಮಹಿಳಾ ರೋಗಿಯನ್ನು ಕುರಿತು) ಮೇಡಂ, ನೀವು ನಿಮ್ಮ ಪತಿಯನ್ನು ಹೇಗೆ ನೋಡುವಿರೋ ಹಾಗೆ ನನ್ನನ್ನು ನೋಡಿ.

ಮಹಿಳಾ ರೋಗಿ: ಏಕೆ?

ಡಾಕ್ಟರ್: ಏಕೆಂದರೆ ನಿಮ್ಮ ಕಣ್ಣಿನಲ್ಲಿ ಡ್ರಾಪ್ ಹಾಕಬೇಕಾಗಿದೆ.

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್**